ದಿನಾಂಕ 05-03-2019 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಲಯದ ಕೊಠಡಿ ಸಂಖ್ಯೆ 103 ರಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ಪೀಠ ನಿರ್ದೇಶನದಂತೆ ಚಾಮರಾಜನಗರದ ಕೊಳ್ಳೇಗಾಲದ ವ್ಯಾಪ್ತಿಯಲ್ಲಿ ಹರಿಯುವ ಕಾವೇರಿ ನದಿಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ಜಿಲ್ಲಾ ಮಟ್ಟದ "ವಿಶೇಷ ಪರಿಸರ ಕಣ್ಗಾವಲು ಕಾರ್ಯಪಡೆ" ಸಮಿತಿಯ ಮೊದಲನೇ ಸಭೆಯ ನಡೆದ ನಡೆವಳಿಗಳು.

ಹಾಜರಿದ್ದ ಅಧಿಕಾರಿಗಳು:-

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು / ಜಿಲ್ಲಾ ದಂಡಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3 | ಶ್ರೀ.ಸಿ.ಎಂ.ವೆಂಕಟೇಶ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ನಾಮ ನಿರ್ದೇಶಿತರು. | ಸದಸ್ಯರು |
| 4 | ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಾಮರಾಜನಗರ. | ಸದಸ್ಯ ಸಂಚಾಲಕರು |

ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಾಮರಾಜನಗರ ಇವರು ಸಭೆಯಲ್ಲಿ ಉಪಸ್ಥಿತರಿದ್ದು ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಶ್ರೀ.ಸಿ.ಎಂ.ವೆಂಕಟೇಶ್, ಜಿಲ್ಲಾ ಕಾನುನು ಪ್ರಾದಿಕಾರದ ನಾಮ ನಿರ್ದೇಶನದ ಸದಸ್ಯರನ್ನು ಮೊದಲಿಗೆ ಸ್ವಾಗತವನ್ನು ಕೋರಿದರು. ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೇಳಿಕೊಳ್ಳಲಾಯಿತು ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳಿಗೆ/ ಸದ್ಯಸ್ಯರುಗಳಿಗೆ ಈ ಸಭೆಯಉದ್ದೇಶವನ್ನು ತಿಳಿಯಪಡಿಸಿದರು.

- ❖ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಪ್ರದಾನ ಪೀಠ, ನವದೆಹಲಿ ಇವರು ಮೂಲ ಅರ್ಜಿ ಸಂಖ್ಯೆ 673/2018 ದಿನಾಂಕ 20-9-2018 ರಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರಿದಿಯನ್ನು ಗಮನಿಸಿ ದೇಶದಲ್ಲಿ 351 ನದಿಗಳಲ್ಲಿ **BOD (Bio-chemical Oxygen Demand)** ಯು **3 mg/L** ಗಿಂತ ಹೆಚ್ಚಿರುವುದರಿಂದ ನದಿಗಳು ಕಲುಷಿತವಾಗಿವೆ ಎಂದು ತಿಳಿಸಿದೆ. ಅದರಲ್ಲಿ ಕರ್ನಾಟಕ ರಾಜ್ಯದ 17 ನದಿಗಳ ವ್ಯಾಪ್ತಿಯು ಕಲುಷಿತವಾಗಿರುವುದನ್ನು ಮನಗಂಡು ಮಾನ್ಯ ರಾಷ್ಟ್ರೀಯ ಹಸಿರು ಪೀಠವು ನಿರ್ದೇಶನವನ್ನು ನೀಡಿ ಎರಡು ತಿಂಗಳಲ್ಲಿ **BOD**ಯನ್ನು **3 mg/L** ಗಿಂತ ಕಡಿಮೆ ಮಾಡಿ ನದಿ ನೀರು ಕನಿಷ್ಠ ಸ್ನಾನಕ್ಕೆ ಯೋಗ್ಯವಾಗುವ ರೀತಿಯಲ್ಲಿ ಕಾರ್ಯಯೋಜನೆ ತಯಾರಿಸಿ ಸಲ್ಲಿಸಲು ಸೂಚಿಸಲಾಗಿದೆ. ಸದರಿ ಕಾರ್ಯಯೋಜನೆ ಅನುಮೋದನೆಗೊಂಡ 6 ತಿಂಗಳೊಳಗಾಗಿ ಕಾರ್ಯಗತ ಮಾಡಬೇಕಾಗಿರುತ್ತದೆ.

- ❖ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಂತೆ ಕಲುಷಿತಗೊಂಡಿರುವ ನದಿಗಳ ಪೈಕಿ ಕಾವೇರಿ ನದಿಯು ಒಂದಾಗಿದ್ದು ಇದರ ವ್ಯಾಪ್ತಿಯು ರಂಗನಾತಿಟ್ಟುವಿನಿಂದ ಸತ್ತೆಗಾಲ ಸೇತುವೆವರೆಗೆ ಗುರುತಿಸಲಾಗಿದೆ. (ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ

ಮುಳ್ಳೂರು ಗ್ರಾಮದಿಂದ ಸತ್ತೇಗಾಲ ಸೇತುವೆ ತನಕ ಹರಿಯುವ ಕಾವೇರಿ ನದಿಯ ವ್ಯಾಪ್ತಿ ಕಲುಷಿತವೆಂದು ಸೂಚಿಸಿದೆ.)

❖ ಈ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ FEE214EPC 2018, ಬೆಂಗಳೂರು ದಿನಾಂಕ 03-01-2019ರಂದು ಜಿಲ್ಲಾ ಮಟ್ಟದ **"ವಿಶೇಷ ಪರಿಸರ ಕಣ್ಗಾವಲು ಕಾರ್ಯಪಡೆ"** ಈ ಕೆಳಕಂಡಂತೆ ರಚಿಸಲಾಗಿದೆ.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು / ಜಿಲ್ಲಾ ದಂಡಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3 | ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ನಾಮ ನಿರ್ದೇಶಿತರು. | ಸದಸ್ಯರು |
| 4 | ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಾಮರಾಜನಗರ. | ಸದಸ್ಯ ಸಂಚಾಲಕರು |

ಸದರಿ ಅದೇಶದ ಪ್ರಕಾರ ಈ ಸಮಿತಿಯ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತೆ ಇದೆ.

- ನದಿ ನೀರು ಸಂರಕ್ಷಣೆಗೆ ಸಂಬಂಧಪಟ್ಟ ಇಲಾಖೆಗಳು ಸಿದ್ದಪಡಿಸಿ ರಾಜ್ಯ ನದಿ ಪುನಶ್ಚೇತನ ಸಮಿತಿಯ ಮೂಲಕ ಮಾನ್ಯ ರಾಷ್ಟ್ರೀಯ ಹಸಿರು ಪೀಠಕ್ಕೆ ಸಲ್ಲಿಸಿರುವ ಕ್ರಿಯಾಯೋಜನೆಯಂತೆ ಸಂಬಂಧಪಟ್ಟ ಇಲಾಖೆಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮೇಲ್ವಿಚರಣೆ ಮಾಡುವುದು.
- ಸಮಿತಿಯು ನಿಯಮ ಉಲ್ಲಂಘನೆ ಮಾಡುತ್ತಿರುವವರ ವ್ಯಕ್ತಿಗಳನ್ನು ಗುರುತಿಸಿ ಅವರ ಮೇಲೆ ಕಾನೂನು ಕ್ರಮಜರಿಗಿಸುವುದು.
- ಸಮಿತಿಯು ಕಲುಷಿತವಾಗಿರುವ ನದಿಯ ಪಾತ್ರದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆಯಾಗದಂತೆ ತಡೆಯುವುದು.
- ಸಮಿತಿಯು ಪ್ರತಿ ತಿಂಗಳು ಕೈಗೊಂಡ ಕ್ರಮಗಳ ವರದಿಯನ್ನು ರಾಜ್ಯ ನದಿ ಪುನಶ್ಚೇತನ ಸಮಿತಿಗೆ ಸಲ್ಲಿಸುವುದು. ಹಾಗೆಯೇ ರಾಜ್ಯ ನದಿ ಪುನಶ್ಚೇತನ ಸಮಿತಿಯು ಮೂರು ತಿಂಗಳಿಗೊಮ್ಮೆ ಕ್ರಮಕೈಗೊಂಡ ವರದಿಯನ್ನು ಕೇಂದ್ರ ಮಾಲಿನ್ಯ ಮಂಡಳಿಗೆ ಸಲ್ಲಿಸುವುದು.
- ಈ ವರದಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೆಬ್‌ಸೈಟ್‌ನಲ್ಲಿ ಹಾಗೂ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಚಾಮರಾಜನಗರ ಜಿಲ್ಲೆಯಲ್ಲಿ ಕಾವೇರಿ ನದಿಯು ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದಿಂದ ಸತ್ತೆಗಾಲ ಸೇತುವೆ, ಭರಚುಕ್ಕಿ ಜಲಪಾತ ಹಾಗೂ ಹೊಗೆನಕಲ್ ವ್ಯಾಪ್ತಿಯಲ್ಲಿ ಹರಿಯುತ್ತದೆ. ಈ ವ್ಯಾಪ್ತಿಯಲ್ಲಿ ಯಾವುದೇ ಉದ್ದಿಮೆಗಳು/ಕಾರ್ಖಾನೆಗಳು ಇರುವುದಿಲ್ಲವೆಂದು ಪರಿಸರ ಅಧಿಕಾರಿಗಳು ತಿಳಿಸಿದರು.

ತಿಳಿಸಿರುವ ಅಂಶಗಳ ಅನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಕಾರ್ಯಪಡೆಯ ಅಧ್ಯಕ್ಷರು ಈ ಕಂಡಂತೆ ಸೂಚಿಸಿದರು

- ❖ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು. ಪ್ರಾದೇಶಿಕ ಕಛೇರಿಯು ಪ್ರತಿ ತಿಂಗಳು ಕಾವೇರಿ ನದಿಯ ವ್ಯಾಪ್ತಿಯಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣಾ ವರದಿಯನ್ನು ಸಲ್ಲಿಸುವಂತೆ ಪರಿಸರ ಅಧಿಕಾರಿಗಳಿಗೆ ಸೂಚಿಸಿದರು.
  **(ಕ್ರಮ: ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಾಮರಾಜನಗರ)**

- ❖ ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದಿಂದ ಸತ್ತೇಗಾಲ ಸೇತುವೆ ತನಕ ಬರುವ ಗ್ರಾಮದಲ್ಲಿನ ಗೃಹ ರೊಚ್ಚು ನೀರು ಕಾವೇರಿ ನದಿಗೆ ಸೇರದಂತೆ ಸಂಬಂಧ ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಕೊಳ್ಳೇಗಾಲ ಇವರು ಕಾರ್ಯಯೋಜನೆ ಸಲ್ಲಿಸುವುದು.
  **(ಕ್ರಮ: ಕಾರ್ಯನಿರ್ವಾಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ಕೊಳ್ಳೇಗಾಲ)**

- ❖ ಕೊಳ್ಳೇಗಾಲ ನಗರ ಸಭೆಯ ವ್ಯಾಪ್ತಿಯಲ್ಲಿ ಉತ್ಪತಿಯಾಗುವ ಗೃಹ ರೊಚ್ಚು ನೀರು ಕಾವೇರಿ ನದಿಗೆ ಸೇರದಂತೆ ಕ್ರಮ ವಹಿಸಲು ಆಯುಕ್ತರು. ನಗರ ಸಭೆ ಕೊಳ್ಳೇಗಾಲ ಇವರು ಕಾರ್ಯಯೋಜನೆ ಸಲ್ಲಿಸುವುದು.
  **(ಕ್ರಮ: ಆಯುಕ್ತರು, ನಗರ ಸಭೆ ಕೊಳ್ಳೇಗಾಲ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಚಾಮರಾಜನಗರ)**

- ❖ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಕಾವೇರಿ ನದಿ ಪಾತ್ರದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯಬೇಕಾಗಿದ್ದು ಕಾರ್ಯಯೋಜನೆ ಸಲ್ಲಿಸುವುದು
  **(ಕ್ರಮ: ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ)**

ಈ ನಡುವಳಿಯೊಂದಿಗೆ ಕಾವೇರಿ ನದಿಯ ಪುನಶ್ಚೇತನಕ್ಕಾಗಿ ಅಲ್ಪಾವಧಿ ಮತ್ತು ದೀರ್ಘವಧಿ ಕಾರ್ಯ ಯೋಜನೆಯನ್ನು ತಯಾರಿಸಲು ಹಾಗೂ ಅನುಷ್ಠಾನಗೊಳಿಸಬೇಕಾಗಿರುವ ಇಲಾಖೆಗಳ ವಿವರಗಳನ್ನು ಲಗತ್ತಿಸಲಾಗಿದೆ. ಅದರಂತೆ ಸಂಬಂಧ ಪಟ್ಟ ಇಲಾಖೆಗಳು ಕಾರ್ಯಯೋಜನೆಯನ್ನು ಸಿದ್ದಪಡಿಸಿ ಹಾಗೂ ಶೀಘ್ರದಲ್ಲಿ ಕಾರ್ಯಗತಗೊಳಿಸಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ವಂದನೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಪರಿಸರ ಅಧಿಕಾರಿ,**<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಹಾಗೂ ಸದಸ್ಯ ಸಂಚಾಲಕರು,<br>ವಿಶೇಷ ಪರಿಸರ ಕಣ್ಗಾವಲು ಕಾರ್ಯಪಡೆ<br>ಚಾಮರಾಜನಗರ | **ಜಿಲ್ಲಾಧಿಕಾರಿಗಳು**<br>ಚಾಮರಾಜನಗರ ಜಿಲ್ಲೆ ಹಾಗೂ ಅಧ್ಯಕ್ಷರು<br>ವಿಶೇಷ ಪರಿಸರ ಕಣ್ಗಾವಲು ಕಾರ್ಯಪಡೆ<br>ಚಾಮರಾಜನಗರ |